ಪರಿಸರ ಮತ್ತು ನೈರ್ಮಲ್ಯೀಕರಣ ಕಾಪಾಡುವ ದೃಷ್ಟಿಯಿಂದ ಸ್ವಚ್ಛ ಗ್ರಾಮ ಯೋಜನೆ

4974 - ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಪರಿಸರ ಮತ್ತು ನೈರ್ಮಲ್ಯೀಕರಣ ಕಾಪಾಡುವ ದೃಷ್ಟಿಯಿಂದ "ಸ್ವಚ್ಛ ಗ್ರಾಮ ಯೋಜನೆ" ಜಾರಿಗೊಳಿಸಲು ಸರ್ಕಾರ ಯೋಚಿಸಿದೆಯೇ?

ಆ) ಈ ಯೋಜನೆಯಡಿ ಪ್ರತಿ ತಾಲ್ಲೂಕಿಗೆ ಎಷ್ಟು ಹಣ ವೆಚ್ಚ ಮಾಡಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ವತಿಯಿಂದ ಸ್ವಚ್ಛ ಗ್ರಾಮ ಯೋಜನೆಯನ್ನು ರೂಪಿಸಲಾಗಿರುವುದಿಲ್ಲ.

ಆ) ಉತ್ತರ (ಅ)ದಿಂದಾಗಿ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಹೆದ್ದಾರಿಗಳು

4976 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳೆಷ್ಟು? ಈ ಹೆದ್ದಾರಿಗಳು ಎಷ್ಟು ಕಿ.ಮೀ.ವರೆಗೆ ಇರುತ್ತವೆ? (ವಿವರವಾಗಿ ಪಟ್ಟಿ ನೀಡುವುದು)

ಆ) ಈ ರಸ್ತೆಗಳನ್ನು ರಿಪೇರಿ ಮಾಡಲು ಕೈಗೊಂಡ ಕ್ರಮಗಳೇನು?

ಇ) ತರೀಕೆರೆಯಿಂದ ಹಾದಿಕೇರಿ ರಸ್ತೆ ಡಾಂಬರೀಕರಣ ಯಾವಾಗ ಪ್ರಾರಂಭವಾಗುತ್ತದೆ?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 13 (ಹದಿಮೂರು) ರಾಷ್ಟ್ರೀಯ ಹೆದ್ದಾರಿಗಳಿದ್ದು ಇವುಗಳ ಒಟ್ಟು ಉದ್ದ 3728 ಕಿ.ಮೀ.ಗಳು. ವಿವರಗಳಿಗಾಗಿ ಪಟ್ಟಿ ಲಗತ್ತಿಸಿದೆ - ಅನುಬಂಧ 'ಎ'.

ಆ) ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚುವುದು ಶೋಲ್ಡರ್ಸ್‌ಗಳ ರಿಪೇರಿ ಮಾಡುವುದು ಇತ್ಯಾದಿ ಸಾಮಾನ್ಯ ದುರಸ್ತಿ ಕಾರ್ಯಗಳನ್ನು ಆಗಿಂದಾಗ್ಗೆ ಕೈಗೊಂಡು ಹೆದ್ದಾರಿಗಳನ್ನು ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿ ಇಡಲಾಗಿದೆ. ವಿಶೇಷ ದುರಸ್ತಿ ಹಾಗೂ ರೈಡಿಂಗ್ ಕ್ವಾಲಿಟಿ ಸುಧಾರಣೆ ಕಾಮಗಾರಿಗಳನ್ನು ಹಂತ ಹಂತವಾಗಿ ಭೂಸಾರಿಗೆ ಮಂತ್ರಾಲಯದ ಮಾರ್ಗಸೂಚಿಯನ್ವಯ ಮಾಡಲಾಗುತ್ತಿದೆ.